ರೂಪಾಯಿ ಸಹಾಯಧನವನ್ನು ಮಂಗಳೂರು ಮಹಾನಗರಪಾಲಿಕೆಗೆ ಕೊಡಬೇಕೆಂದೂ ಕರ್ನಾಟಕ ರಾಜ್ಯ ಸರಕಾರವನ್ನು ಈ ಸಭೆಯ ಮೂಲಕ ವಿನಂತಿಸುತ್ತೇನೆ.

ಶ್ರೀ ವೈಜ್ಯನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ, ಮಂಗಳೂರು ನಗರಕ್ಕೆ ನೀರು ಸರಬರಾಜು ವ್ಯವಸ್ಥೆಯನ್ನು ಕರ್ನಾಟಕ ರಾಜ್ಯ ನಗರ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಲಿಯುವರು ಬಲ್ಕ್ ಆಧಾರದ ಮೇಲೆ ಸರಬರಾಜು ಮಾಡುತ್ತಿದ್ದಾರೆ. ಈ ಯೋಜನೆಗೆ ಅಳವಡಿಸಿರುವ ಪಂಪುಗಳು ಹಳೆಯವುಗಳಾಗಿದ್ದು ಅವುಗಳಿಂದ ಪಂಪು ಮಾಡುವ ಪ್ರಮಾಣ ಕಡಿಮೆಯಾಗಿದೆ. ಸುಮಾರು 18 ಎಂ.ಜಿ.ಡಿ. ಪಂಪ್ ಮಾಡುವ ಬದಲು ಕೇವಲ 13-14 ಎಂ.ಜಿ.ಡಿ. ಮಾತ್ರ ಪಂಪ್ ಮಾಡಲು ಸಾಧ್ಯವಾಗಿದೆ. ಇದಲ್ಲದೆ ವಿದ್ಯುಚ್ಛಕ್ತಿ ಸರಬರಾಜಿನಲ್ಲಿ ವ್ಯತ್ಯಯ ಆಗುತ್ತಿರುವುದರಿಂದ ಈ ಪ್ರಮಾಣದಲ್ಲಿ ಪಂಪ್ ಮಾಡಲು ಸಾಧ್ಯವಾಗುತ್ತಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡು ಹೊಸ ಪಂಪುಗಳನ್ನು ಅಳವಡಿಸಲು 100 ಲಕ್ಷ ರೂಪಾಯಿಗಳ ಒಂದು ಅಂದಾಜನ್ನು ತಯಾರಿಸಲಾಗಿದ್ದು, ಈ ಅಂದಾಜಿಗೆ ಸರ್ಕಾರವು ತಾತ್ವಿಕವಾಗಿ ಅನುಮೋದನೆಯನ್ನು ಆಗಸ್ಟ್ 1994ರಲ್ಲಿ ನೀಡಲಾಗಿದೆ. ಈ ಯೋಜನೆಗೆ ಹುಡ್ಕೋದವರಿಂದ ಆರ್ಥಿಕ ನೆರವನ್ನು ನೀಡಿದ ಮೇಲೆ ಈ ಕೆಲಸವನ್ನು ಪ್ರಾರಂಭಿಸಲಾಗುವುದು. ಇದೂ ಅಲ್ಲದೆ ಮಂಗಳೂರು ನಗರದಲ್ಲಿನ ವಿತರಣಾ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಲು 14 ಕೋಟಿ ರೂಪಾಯಿಗಳ ಅಂದಾಜನ್ನು ತಯಾರು ಮಾಡಲಾಗಿದ್ದು, ಅಂದಾಜಿಗೆ ಮಂಜೂರಾತಿ ನೀಡಲಾಗಿದೆ. ಕೆಲಸ ಪ್ರಗತಿಯಲ್ಲಿದೆ. ಇದುವರೆವಿಗೂ ಈ ಯೋಜನೆಗೆ ಸುಮಾರು 1.70 ಕೋಟಿ ರೂಪಾಯಿಗಳು ಖರ್ಚಾಗಿವೆ. ಈ ಯೋಜನೆಗೆ 1994-95ರ ಬಜೆಟ್ ನಲ್ಲಿ 300 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಇದೂ ಅಲ್ಲದೆ ಎಲ್.ಐ.ಸಿ.ಯಿಂದಲೂ ಹಣವನ್ನು ಭರಿಸಲಿದೆ. ಹಾಗೂ ಈ ಕೆಲಸವನ್ನು ಪ್ರಗತಿಯಲ್ಲಿಡಲಾಗಿದೆ ಎಂದು ತಿಳಿಸಲಿಚ್ಛಿಸುತ್ತೇನೆ.

3. ಹುಬ್ಬಳ್ಳಿ ವಿಭಾಗದ ಹಿರೇಕೇರೂರು, ಹಾವೇರಿ, ರಾಣೆಬೆನ್ನೂರು ಡಿಪೋಗಳ ಬಸ್ಸುಗಳು ನಿಗದಿತ ವೇಳೆಗೆ ಓಡಿಸುವುದರ ಬಗ್ಗೆ

ಶ್ರೀ ಯು.ಬಿ. ಬಣಕಾರ್ (ಹಿರೇಕೇರೂರು) : ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಹುಬ್ಬಳ್ಳಿ ವಿಭಾಗದ ಹಿರೇಕೇರೂರು, ಹಾವೇರಿ ಮತ್ತು ರಾಣೆಬೆನ್ನೂರು ಡಿಪೋಗಳ ಬಸ್ಸುಗಳು ನಿಗದಿತ ವೇಳೆಗೆ ಸರಿಯಾಗಿ ಓಡಿಸುವುದಿಲ್ಲ, ಒಂದು ತಾಸಿನಿಂದ 5 ತಾಸಿನವರೆಗೆ ತಡವಾಗಿ ಓದುತ್ತಿವೆ. ಒಂದೊಂದು ದಿವಸ ಬಸ್ಸುಗಳನ್ನು ರದ್ದು ಮಾಡಲಾಗುತ್ತಿದೆ. ಹಾಗೆಯೇ ಯಾವ ಊರಿಗೆ ಹೋಗಬೇಕಾಗಿತ್ತೋ ಆ ಊರಿಗೆ ಹೋಗದೆ ಮಧ್ಯದಲ್ಲೇ ವಾಪಸ್ಸು ಬರುವ ಪದ್ಧತಿ ಸುಮಾರು ದಿವಸಗಳಿಂದ ನಡೆದುಕೊಂಡು ಬರುತ್ತಿದೆ. ಆದ್ದರಿಂದ ಮಾನ್ಯ ಸಾರಿಗೆ ಸಚಿವರು ಹಾಗೂ ಸರ್ಕಾರ ಈ ಬಗ್ಗೆ ತೀವ್ರ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಕೋರುತ್ತೇನೆ.

ಶ್ರೀ ಜೆ. ಎಚ್. ಪಟೇಲ್ (ಉಪ ಮುಖ್ಯ ಮಂತ್ರಿಗಳು) : ಮಾನ್ಯ ಸದಸ್ಯರು ಹೇಳಿರುವ ಹಾಗೆ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳಿಂದ ಆಗತಕ್ಕ ತೊಂದರೆಯ ಬಗ್ಗೆ ಈಗಾಗಲೇ ಸರ್ಕಾರದ ಗಮನಕ್ಕೆ ಬಂದಿದೆ. ಸಂಬಂಧಪಟ್ಟ ಮಂತ್ರಿಗಳು ವಿಷಯವನ್ನು ಚರ್ಚೆ ಮಾಡುವುದಕ್ಕೋಸ್ಕರ ಹೋಗಿದ್ದಾರೆ. ಮಾನ್ಯ ಸದಸ್ಯರ ಆತಂಕವನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

4. ಪುತ್ತೂರು ತಾಲ್ಲೂಕಿನ ಉಪ್ಪಿನಂಗಡಿ ಹಾಗೂ ಪಾಣಾಲೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯರ ಕೊರತೆ

ಶ್ರೀ ಡಿ.ಪಿ. ಸದಾನಂದ ಗೌಡ (ಪುತ್ತೂರು) : ಮಾನ್ಯ ಅಧ್ಯಕ್ಷರೆ, ಪುತ್ತೂರು ತಾಲ್ಲೂಕಿನ ಉಪ್ಪಿನಂಗಡಿ ಹಾಗೂ ಪಾಣಾಜೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ